ಹುಡುಗಿಗೆ ಅವಳ ಗಂಡ ಒಂದು ಮಗುವಾದ ಮೇಲೆ ಹೀಗೆ ತಪ್ಪು ಮಾಡುವುದೇ? ಎಂದು ಎಲ್ಲರೂ ಮರುಕಪಟ್ಟಿದ್ದರು. ಈ ಹಿನ್ನೆಲೆ ತಮ್ಮ ಚರ್ಚೆಯ ಭರದಲ್ಲಿ ಅಜ್ಜನವರು, "ನಮ್ಮ ಮನೆ ಮಕ್ಕಳನ್ನು ಬಿಡಿ, ನಮ್ಮ ಗ್ರಾಮದ ಹೆಣ್ಣುಮಗಳಿಗೆ ಮದುವೆಯಾದ ಗಂಡ ಸುಮ್ಮಸುಮ್ಮನೆ ಬಿಡುವ ತಪ್ಪು ಮಾಡಿದರೆ ನಾವು ಕೇಳಿಯೇವೆಯೆ?" ಎಂದು ಹೇಳಲು ಕಾರಣ.

ನಮ್ಮ ಅಜ್ಜ ಮಳೆಗಾಲದಲ್ಲಿ ಮನೆಯಲ್ಲಿ ತೊರವೆ ರಾಮಾಯಣ, ಕುಮಾರವ್ಯಾಸನ ಭಾರತ, ಲಕ್ಷ್ಮೀಶನ ಜೈಮಿನಿ ಭಾರತ ಮೊದಲಾದವನ್ನು ತಕ್ಕ ಮಟ್ಟಿಗೆ ಓದಿ ಮೊಮ್ಮಕ್ಕಳಿಗೆ ಕತೆ ಹೇಳುತ್ತಿದ್ದವರು. ಹಾಗಾಗಿ ಅಜ್ಜ, ಲಕ್ಷ್ಮೀಶನಿಂದ 'ಪಾವನಕೆ ಪಾವನಂ ಮಂಗಳಕೆ ಮಂಗಳ' ನಾಮನಾದ ರಾಮ ಬೇಡ ಎಂದರೆ ಸೀತೆ ಲಕ್ಷ್ಮಣನಲ್ಲಿ ಕೇಳುವುದೇನು, 'ಬೊಬ್ಬುಳಿಯ ಪೂವಿನೊಳ್ ಮಧುವುಂಟೆ?' ಎಂದಲ್ಲವೆ. ಗಂಡ ತ್ಯಜಿಸಿದ ಸೀತೆಯ ಅವಸ್ಥೆ ಎಂತದು! ಅದೂ ಕೂಡಾ ಕಾಡಿನೊಳಗೆ. ರಾಮಾ ರಾಮಾ! ಜಾಲಿಯ ಹೂವಿನಲ್ಲಿ ಜೇನು ಎಲ್ಲುಂಟು ಎಂದಲ್ಲವೆ ಅವಳು ಕೇಳುವುದು. ಆ ಸುದ್ದಿಯನ್ನು ಲಕ್ಷ್ಮಣ ಹೇಳುವಾಗಲೆ ಅವಳು 'ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದು' ಭೂಮಿಗೆ ಬೀಳುವ ಹಾಗೆ ಅವನ ಮಾತು ಕಿವಿಗೆ ಬೀಳುವಾಗಲೆ ಹಮ್ಮೈಸಿ ಧರೆಗೆ ಬಿದ್ದಳು. ಎಂತಹ ಸಂಕಟ ಆಗಿರಬಹುದು ಸೀತಮ್ಮನಿಗೆ. ಪತ್ನೀ ಪರಿತ್ಯಾಗಕ್ಕೆ ಅದೂ ಬಸುರಿಯಾಗಿರುವ ಒಂಟಿ ಹೆಣ್ಣನ್ನು ಹೇಳದೆ ಕೇಳದೆ ಬಿಡುವುದಕ್ಕೆ ಕಾಡೂ ಒಂದು ಜಾಗವೆ? ಅದೇನಾದರೂ ನಿಮಗೆ ಅಂದಾಜು ಉಂಟಾ! ಜೈಮಿನಿ ಭಾರತದಲ್ಲಿ ಸುಮ್ಮಸುಮ್ಮನೆ ಬರೆದಿದ್ದಾರೆಯೆ? ರಾಮ ರಾಮಾ ಎಂದರು.

ಆ ದಿನ ಯಕ್ಷಗಾನ ಪ್ರಸಂಗಗಳು, ಅದು ಇದು ಎಲ್ಲಾ ಕತೆಗಳೂ ಬಂದು ಹೋಗಿ ಅಜ್ಜನಿಗೂ ಸ್ನೇಹಿತರಿಗೂ ದೊಡ್ಡ ಚರ್ಚೆಯಾಯಿತು. ಇದೆಲ್ಲಾ ನಡೆಯುತ್ತಿದ್ದ ಹಾಗೆ ನನ್ನ ಅಜ್ಜಿ ದೊಡ್ಡದೊಂದು ಹರಿವಾಣದ ಮೇಲೆ ಬಾಳೆ ಎಲೆ ಹಾಕಿ ಅದರ ತುಂಬಾ ನಮ್ಮ ತೋಟದಲ್ಲಿ ಬೆಳೆದ ಹಲಸಿನ ಹಣ್ಣಿನ ತೊಳೆಗಳನ್ನು ಎಲ್ಲರಿಗೂ ತಿನ್ನಲು ತಂದಿಟ್ಟರು. ಎಲ್ಲರೂ ಹಣ್ಣು ತಿಂದು, ಕೈ ತೊಳೆದು, ವೀಳ್ಯ ಹಾಕಿಕೊಂಡು ಆ ದಿನದ ಚರ್ಚೆ ಮುಗಿಯಿತು. ಮಾರನೇ ದಿನ ಮಧ್ಯಾಹ್ನ ಹಿಂದಿನ ಸಂಜೆ ರಾಮ ಹೆಂಡತಿಯನ್ನು ಬಿಟ್ಟದ್ದು ತಪ್ಪು ಎಂದು ವಾದಿಸುತ್ತಿದ್ದ ಅದೇ ಅಜ್ಜ ಮಂಗಳಾರತಿ ಬಳಿಕ ಶ್ರೀರಾಮಚಂದ್ರ ಕಾಪಾಡಪ್ಪ ಎಂದು ನೀಟಂಪ ಅಡ್ಡ ಬಿದ್ದು ತೀರ್ಥ ಪ್ರಸಾದಗಳ ಬಳಿಕ ರಾಮ, ರಾಮ ರಾಮ, ರಾಮಾ ಶ್ರೀರಾಮ ಎಂದು ಜಪ ಮಾಡುತ್ತಾ ಚಾವಡಿಗೆ ಬಂದರು. ಇಂದಿಗೂ ಒಂದು ವಿಸ್ಮಯವಾಗಿ ಕಾಡುವ ಆ ನೆನಪು ಶ್ರೀರಾಮನ ಬಗೆಗಿನ ಭಾರತದ ಸಂಕೀರ್ಣ ಮನಸ್ಥಿತಿಯ ಸಂಕೇತ ಎಂದೆ ನಾನು.

'ನಮಗೆ ಅಂದರೆ ಯಕ್ಷಗಾನದ ಜಿಲ್ಲೆಗಳಿಂದ ಬಂದವರಿಗೆ ರಂಗದ ಮೇಲಿನ ರಾಮ ಬೇರೆ, ಅಂತರಂಗದ ರಾಮ ಬೇರೆ' ಎಂದರು ವಾಕಿಂಗ್ ಗುಂಪಿನಲ್ಲಿದ್ದ ಸ್ನೇಹಿತರೊಬ್ಬರು. ನಿಜ. ನೋಡಿ, ರಾಮನು ಸೀತೆಯನ್ನು ಬಿಟ್ಟುದನ್ನು ವಿರೋಧಿಸಿ ಮಾತನಾಡುತ್ತಿದ್ದ ಅಜ್ಜ ಕೂಡಾ ಹೇಳುತ್ತಿದ್ದುದು ರಾಮ ರಾಮಾ ಇದು ಅನ್ಯಾಯ ಎಂದಲ್ಲವೇ! ನ್ಯಾಯ, ಭಕ್ತಿ, ಪ್ರೀತಿ, ಗೌರವ ಎಲ್ಲದಕ್ಕೂ ನಮಗೆ ರಾಮನೇ ಸಿಕ್ಕುವುದು. ಭಕ್ತರಾಮ, ಕೋಡಿರಾಮ, ಪೋಡಿರಾಮ, ಗಾಡಿ ರಾಮ, ಸಿಪಾಯಿ ರಾಮ, ಸೇರೆಗಾರ ರಾಮ – ಹೀಗೆ ರಾಮ ಸಲ್ಲದ ನಾಮಪದ, ಕ್ರಿಯಾಪದ, ಸ್ಥಳನಾಮ, ಸ್ಥಳಪುರಾಣಗಳಾವುವೂ ನಮ್ಮಲ್ಲಿಲ್ಲ.

'ಶ್ರೀ ರಾಮಾಯಣ ದರ್ಶನಂ'ನಲ್ಲಿ ಮಾತ್ರ ಕುವೆಂಪು ಅವರು ಶ್ರೀರಾಮನ ವೈರುಧ್ಯವನ್ನು ಮನಕ್ಕೆ ಚುಚ್ಚುವ ಹಾಗೆ ತೆಗೆದಿಟ್ಟಿದ್ದಾರೆ. ಲಂಕೆಯಲ್ಲಿ ಅಗ್ನಿಪರೀಕ್ಷೆಗಾಗಿ ಬೆಂಕಿಯನ್ನು ಹೊಗುವ ಮೊದಲು



ಸೀತೆ ಕಣ್ಣೀರಿನಿಂದ ತೊಳೆಯುತ್ತಾ ದಿಂಡುರುಳುವ ಶ್ರೀರಾಮನ ಪಾದಗಳನ್ನು ಕುವೆಂಪು, 'ಗೌತಮ ಶಾಪ ಕಿಲ್ಬಿಷ ವಿಮೋಚನಾ ಪಾದಂಗಳಂ' ಎನ್ನುತ್ತಾರೆ. ಪತಿಯಾದ ಮಹರ್ಷಿ ಗೌತಮರು ಪತ್ನಿ ಅಹಲ್ಯೆಯ ಶೀಲದ ಬಗ್ಗೆ ಸಿಟ್ಟುಗೊಂಡು ಕಲ್ಲಾಗು ಎಂದು ಶಾಪ ಕೊಡುತ್ತಾರೆ. ಶೀಲಶಂಕಿತ ಆ ಅಪವಾದದ ಶಾಪದಿಂದ ವಿಮೋಚನೆಗೊಳಿಸಿದ್ದು ಶ್ರೀರಾಮನ ಪಾದಸ್ಪರ್ಶ. ಅದೇ ಶ್ರೀರಾಮ ತನ್ನ ಪತ್ನಿ ಸೀತಾಮಾತೆಯ ಶೀಲದ ಮೇಲೆ ಅದೇ ಅಪವಾದ ಹೊರಿಸುತ್ತಿದ್ದಾನೆ. ಯಾವ ಶಾಪದಿಂದ ಶ್ರೀರಾಮನ ಪಾದಗಳು ಅಹಲ್ಯೆಯನ್ನು ವಿಮೋಚನೆಗೊಳಿಸಿದವೋ, ಅದೇ ಶ್ರೀರಾಮನ ಪಾದಗಳ ಮೇಲೆ ಅವನ ಧರ್ಮಪತ್ನಿ ಸೀತೆ ಅದೇ ಅಪವಾದವನ್ನು ಹೊತ್ತು ಕಣ್ಣೀರು ಸುರಿಸುತ್ತಿದ್ದಾಳೆ. ಅಲ್ಲಿ ಕಲ್ಲು ಮನುಷ್ಯಳಾದರೆ ಇಲ್ಲಿ ಮನುಷ್ಯಳು ಕಲ್ಲಿನಂತೆ ಹೃದಯವನ್ನು ಗಟ್ಟಿ ಮಾಡಿಕೊಳ್ಳಬೇಕಾದ ಸ್ಥಿತಿ. ಎಂತಹ ವ್ಯಂಗ್ಯ ಎಂದೆ ನಾನು.

ನನ್ನ ಮಾತುಗಳನ್ನು ಕೇಳುತ್ತಿದ್ದ ಗೆಳೆಯ ವಿದ್ಯಾಪತಿ ವಾಕಿಂಗ್‌ನಲ್ಲಿ ಆತನಕ ಪಾಲಿಸಿಕೊಂಡು ಬಂದಿದ್ದ ತಮ್ಮ ಮೌನವ್ರತವನ್ನು ಮುರಿದು, ''ನಮ್ಮ ಹಿಂದಿನವರು 'ರಿಲಿಜಿಯಸ್' ಆದರೆ 'ಕಮ್ಯೂನಲ್' ಆಗಿರಲಿಲ್ಲ. ಈಗಿನವರಿಗೆ ರಿಲಿಜಿಯಸ್ ಆಗಿರುವುದು ಮತ್ತು ಕಮ್ಯುನಲ್ ಮನೋಭಾವ ಇವುಗಳ ನಡುವಿನ ವ್ಯತ್ಯಾಸವೇ ತಿಳಿಯುತ್ತಿಲ್ಲ. ಅದೇ ಸಮಸ್ಯೆ'' ಎಂದು ಕರ್ನಾಟಕ ಸಂಗೀತದ ಅವರ ಮಿತ್ರ ವೆಂಕಟ್ರಾಮನ ಮಗನ ಹೆಸರಿನ ಹಿಂದಿನ ಕತೆ ಹೇಳಿದರು. ಶೇಷಾದ್ರಿಪುರಂ ಸಂಗೀತ ಕಛೇರಿಗಳಿಗೆ ತಪ್ಪದೆ ಬರುತ್ತಿದ್ದ ವೆಂಕಟ್ರಾಮರ ಮಗ ಸಾಕೇತರಾಮ ನನ್ನ ಮಗನ ಸಹಪಾಠಿ. ಹಾಗಾಗಿ ನಾನು ಇನ್ನಷ್ಟು ಆಸಕ್ತಿಯಿಂದ ಕೇಳಿದೆ.

ತ್ಯಾಗರಾಜರ ಪಂಚರತ್ನ ಕೀರ್ತನೆಗಳು ಇತ್ಯಾದಿಗಳೆಲ್ಲಾ ಇದ್ದರೂ ವೆಂಕಟ್ರಾಮರಿಗೆ ಬಹುಪ್ರಿಯವಾದ ಒಂದು ಕೀರ್ತನೆ ತ್ಯಾಗರಾಜರ ಚಲಮೇಲರ ಸಾಕೇತರಾಮಾ. 'ಹಟ ಮಾಡಬೇಡಪ್ಪ ಸಾಕೇತರಾಮ, ಕರುಣೆಯಿಂದ ನನಗೆ ಭಕ್ತಿ ಮಾರ್ಗಮು ತೋರು' ಎಂದು ತ್ಯಾಗರಾಜರು ಬೇಡಿಕೊಳ್ಳುವ ಕೀರ್ತನೆ. ಸಾಕೇತ ಇಕ್ಷ್ವಾಕು ವಂಶಸ್ಥರ ರಾಜ್ಯ. ಅವರ ರಾಜಧಾನಿ ಸಾಕೇತಪುರಿ. ಯುದ್ಧದಲ್ಲಿ ದಶರಥನನ್ನು ಗೆಲ್ಲಲು ಸಾಧ್ಯವಿಲ್ಲ ಎಂಬುದರಿಂದ ಆ ಬಳಿಕ ಅದು ಅಯೋಧ್ಯೆ. ಹಾಗಾಗಿ ರಾಮನನ್ನು ಎಲ್ಲಾ ಕಡೆಯೂ ಸಾಕೇತರಾಜ ಎನ್ನುವುದು. ತ್ಯಾಗರಾಜರು ಇಲ್ಲೊಂದು ಕಡೆ ಅವನನ್ನು 'ಸಾಕೇತರಾಮ' ಎಂದಿದ್ದಾರೆ. ಹಾಗಾಗಿ ಸಂಗೀತಪ್ರಿಯ ವೆಂಕಟ್ರಾಮರು ತಮ್ಮ ಮಗನಿಗೆ ಸಾಕೇತರಾಮ ಎಂದು ಹೆಸರಿಟ್ಟುದಂತೆ. ವಿದ್ಯಾಪತಿಗೆ ನಾನು ಪ್ರಸಿದ್ಧ ಹಾಡುಗಾರರಾದ ಸಂಜಯ ಸುಬ್ರಹ್ಮಣ್ಯಂ ಆ ಕೀರ್ತನೆಯನ್ನು ಮೇಳಕರ್ತಾರಾಗವಾದ ನಟಭೈರವಿಯ ಜನ್ಯ ರಾಗ 'ಮಾರ್ಗಹಿಂದೋಲಮ್'ನಲ್ಲಿ ಹಾಡುವುದು ತುಂಬಾ ಇಷ್ಟ ಎಂದೆ. ಸಂಜಯ ಸುಬ್ರಹ್ಮಣ್ಯಂ ಆ ರಾಗದಲ್ಲಿ ತ್ಯಾಗರಾಜರ ನಿಜವಾದ ಭಕ್ತಿಯ ಆವಿಷ್ಕಾರ ಮಾಡಿ ತೋರಿಸುತ್ತಾರೆ ಎಂದರು ಹ.ರಾ.ರು. ಆದರೆ ಜತೆಯಲ್ಲಿ ಬರುತ್ತಿದ್ದ ರಘುರಾಮ ರಾಯರಿಗೆ ಖರಹರ ಪ್ರಿಯದ ಜನ್ಯ ರಾಗವಾಗಿಯೂ ಇರುವ ಮಾರ್ಗ ಹಿಂದೋಲಮ್‌ನಲ್ಲಿ ಸುಧಾ ರಘುನಾಥನ್ ಹಾಡುವುದು ಇಷ್ಟವಂತೆ.

ನಮ್ಮ ಸಂಗೀತದಲ್ಲಿ ವೈವಿಧ್ಯ ಜಾಸ್ತಿ. ಭಕ್ತಿಗೆ ಕರ್ನಾಟಕ ಸಂಗೀತವೇ ಯಾಕಾಗಬೇಕು, ಹಿಂದೂಸ್ಥಾನಿಯಲ್ಲೂ ಇಲ್ಲವೇ? ಎಂದು ರಾಮಪ್ರಸಾದರು ಮಾತು ತೆಗೆದರು. ಮಾತು ಸಂಗೀತದ ಚರ್ಚೆಗೆ ತಿರುಗುತ್ತಿದ್ದಂತೆ ಜೊತೆಗಿದ್ದ ಜೀವನರಾಮರು ವಾಕಿಂಗ್ ರೌಂಡ್‌ಗಳು ಮುಗಿದವು. 'ಇನ್ನು ನಿಮ್ಮ ನಿಮ್ಮ ಸಂಗೀತ ವೈವಿಧ್ಯ, ಸಾಂಸ್ಕೃತಿಕ ಬಹುತ್ವದ ಚರ್ಚೆಯಾಗಿ ಪರಿವರ್ತನೆ ಹೊಂದುವ ಮೊದಲೇ ಪಕ್ಕದ ಶ್ರೀರಾಮ ಟಿಫನ್ ರೂಂನಲ್ಲಿ ಜೊತೆಯಾಗಿ ಕಾಫಿ ಕುಡಿದು ಈ ಭಾನುವಾರದ ವಾಕಿಂಗ್ ಗೆ ಮಂಗಳ ಹಾಡೋಣ, ಆಗಬಹುದೇ' ಎಂದು ಪ್ರಕಟಣೆ ಹೊರಡಿಸಿದರು. 'ಆಗಬಹುದು. ಆದರೆ ಈ ಸಲ ಬಿಲ್ಲನ್ನು ಎತ್ತಬೇಕಾದ ರಾಮ ಯಾರಪ್ಪಾ' ಎನ್ನುತ್ತಾ ಪಿ.ವಿ. ರಾಂ ಅಲಿಯಾಸ್ ಪದ್ಮನಾಭ ವಿದಾಂತ ರಾಮರಾಯರು ಟಿಫನ್ ರೂಮ್ ಕಡೆ ಹೆಜ್ಜೆ ಹಾಕತೊಡಗಿದರು.

ಪ್ರತಿಕ್ರಿಯಿಸಿ: **feedback@sudha.co.in**